Bore Well Sunk in Jamakhandi Taluk

348. SRI P.M. BANGI (Jamkhandi).—Will the Minister for Rural Development and Panchayati Raj be pleased to state.—

(*a*) the number of bore wells sunk in Jamakhandi taluk and the number of bore wells failed.

(*b*) the names of villages and towns in which bore wells have been sunk;

(*c*) the number of bore wells fitted with hand pumps and electric pumps (The names of villages and the towns may be furnished

(*d*) the number of hand pumps that are in working condition (Names of places may be given);

(*e*) whether any steps have been taken by Government or by Panchayats to effect repairs to hand pumps;

(*f*) If not, reasons for the same?

SRI K. PRABHAKAR (Minister for Rural Development and Panchayati Raj).—

(*a*) (i) 67.
(ii) 11.

(*b*) *vide* Statement No. 1 appended.

(*c*) (i) Hand pumps ... 35
(ii) Power pumps ... 9
vide Statement II appended

(*d*) 31-*vide* Statement No. III appended.

(*e*) Yes.

(*f*) Does not arise.

STATEMENT I

Names of Villages and Towns in which borewells have been Sunk in Jamakhandi Taluk.

Sl. No.	Name of villalges and towns	Sl. No.	Name of villages and towas
1	Albal	5	Dasaramaddi
2	Banhatti (Urban)	6	Gothe
3	Bidari	7	Halaingali
4	Chickpadsalgi	8	Jamkhandi town (urban)

೦	೨	೩	೪
9	Kalatippi	25	Kalabiligi
10	Kalloli	26	Chikkalki
11	Maigur	27	Tungal
12	Muttur	28	Hirepadsalgi
13	Rampur (Urban)	29	Jambagi (KB)
14	Rabkavi (Urban)	30	,, (K.D.)
15	Sasalatti	31	Madarkandi
16	Terdal (Urban)	32	Nagnur
17	Tamadaddi	33	Halyal
18	Hanagandi	34	Gani
19	Navalgi	35	Madammatti
20	Jagadal	36	Yaragatti
21	Chimmad	37	Abihundi
22	Todulbagi	38	Takkakki
23	Gadyal	39	Yellatti
24	Kannoli	40	Aski

STATEMENT No. II

Names of villages and towns in which bore-wells have been fitted with hand pumps/power pumps in Jamkandi Taluk

Sl. No.	Name of villages and towns	No of hand pumps fixed	No. of power pumps fixed
1	Albal	1	...
2	Banhatti (Urban)	...	...
3	Bidari	1	...
4	Chickpadsalgi	1	...
5	Dasarmaddi	1	...
6	Gothe	1	2
7	Halaingali	...	1
8	Jamkhandi Town (Urban)	...	4
9	Kalatippi	...	1
10	Kalloli	...	...
11	Maigur	2	...
12	Muttur	1	...
13	Rampur (Urban)	1	...
14	Rabkavi (Urban)	...	...

1	2	3	4
15	Sasalatti	2	...
16	Tereal (Urban)	1	...
17	Tamadaddi	1	1
18	Hanagandi	3	1
19	Navalgi	1	...
20	Jagadal	2	...
21	Chimmad	1	...
22	Todalbagi	1	...
23	Gadyal	...	...
24	Kannoli	1	...
25	Kalabilgi	1	...
26	Chikkalki	2	...
27	Tungal	1	...
28	Hirepadnalgi	3	...
29	Jambagi (BK)	...	...
30	Jambagi (M.D.)	...	...
31	Madarkandi	1	...
32	Nagnur	1	...
33	Halyal	1	...
34	Gani	1	...
35	Madammatti	...	...
36	Yeragatti	...	...
37	Adihundi	1	..
38	Takkakki	1	...
39	Yellatti	...	...
40	Aski	...	...
	Total	35	9

STATEMENT No. III

Names of villages and Towns where the hand pumps are in working conditions in Jamakhandi Taluk.

Sl. No.	Name of villages and towns	Number of hand pumps in working order
1	Albal	...
2	Banahatti (Urban)	...
3	Bidari	...
4	Chickpadsalgi	1

1	2	3
5	Dasaramaddi	...
6	Gothe	...
7	Halaingali	...
8	Jamkhandi town (Urban)	...
9	Kalatippi	...
10	Kalloli	...
11	Maigur	2
12	Muttur	1
13	Rampur (Urban)	1
14	Rabkavi (Urban)	...
15	Sasalatti	2
16	Terdal (Urban)	1
17	Tamadaddi	...
18	Hanagandi	3
19	Navalgi	1
20	Jagadal	2
21	Chimmad	1
22	Todalbagi	1
23	Gadyal	...
24	Kannoli	1
25	Kalabiligi	2
26	Chikkalki	2
27	Tungal	1
28	Hirepadsalgi	3
29	Jambagi (BK)	...
30	Jambagi (KD)	1
31	Madarkandi	1
32	Nagnur	1
33	Halyal	1
34	Gani	...
35	Madamatti	...
36	Yeragatti	...
37	Adihundi	1
38	Takkakki	1
39	Yellatti	...
40	Aski	...
	Total ...	81

ಶ್ರೀ ಪಿ. ಎಂ. ಭಾಂಗಿ —ಸ್ವಾಮಿ, ತಾವು 'ಸಿ' ಪ್ರಶ್ನೆಗೆ ಉತ್ತರ ಕೊಡುತ್ತಾ 35 ಕ್ಕೆ ಪಂಪುಗಳು ಮತ್ತು 9 ವಿದ್ಯುತ್ ಪಂಪ್‌ಗಳನ್ನು ಕೊಳವೆ ಬಾವಿಗಳಿಗೆ ಜೋಡಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಒಟ್ಟು 44 ಕೊಳವೆ ಬಾವಿಗಳಿಗೆ ಈಗ ಪಂಪ್‌ಗಳನ್ನು ಜೋಡಿಸಿದ್ದೀರಿ. ಉಳಿದ 23 ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಯಾವಾಗ ಜೋಡಿಸುತ್ತೀರಿ ?

† ಶ್ರೀ ಕೆ. ಪ್ರಭಾಕರ್.—ಉಳಿದ ಬೋರ್‌ವೆಲ್‌ಗಳಿಗೆ ಪಂಪ್‌ಸೆಟ್‌ಗಳನ್ನು ಜೋಡಿಸುವ ವ್ಯವಸ್ಥೆಯನ್ನು ಶೀಘ್ರವಾಗಿ ಕೈಗೊಳ್ಳುತ್ತೇವೆ.

ಶ್ರೀ ಪಿ ಎಂ ಭಾಂಗಿ.—ಈ ಬೋರ್‌ವೆಲ್‌ಗಳಿರುವ ಪ್ರದೇಶಗಳಲ್ಲಿ ಹರಿಜನರು ವಾಸ ಮಾಡುವ ಪ್ರದೇಶಗಳು. ಆ ಜನಗಳಿಗೆ ನೀರಿನ ಬವಣೆ ಇನ್ನೂ ತಪ್ಪಿಲ್ಲ. ನೀರಿಗಾಗಿ ಭಿಕ್ಷೆ ಬೇಡುವುದು ಇನ್ನೂ ತಪ್ಪಿಲ್ಲ ತಾವು ಗಮನ ಕೊಟ್ಟು ಒಂದು ತಿಂಗಳೊಳಗೆ ಉಳಿದ ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಜೋಡಿಸುತ್ತೀರಾ ಸ್ವಾಮಿ.

ಶ್ರೀ ಕೆ. ಪ್ರಭಾಕರ್.—ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಜೋಡಿಸುವಾಗ ಹರಿಜನರು ಮತ್ತು ಬೇರೆಯವರು ಎಂಬ ಭೇದಭಾವ ಮಾಡುವುದು ಸರ್ಕಾರದ ನಿಯಮದಲ್ಲಿಲ್ಲ ಎಲ್ಲೆಲ್ಲಿ ಜೋಡಿಸಿರುತ್ತೇವೆ ಅಲ್ಲೆಲ್ಲಾ ಎಲ್ಲ ಜನರು ನೀರನ್ನು ಉಪಯೋಗಿಸಿಕೊಳ್ಳಬೇಕು ಪಂಪ್ ಜೋಡಿಸಿದೇ ಇರುವುದರಿಂದ ಅಗಿರತಕ್ಕ ಅನಾನುಕೂಲಗಳಿರುವ ಕಡೆಗಳಲ್ಲಿ ಆದಷ್ಟು ಬೇಗ ಪಂಪ್ ಜೋಡಿಸಿಕೊಡುತ್ತೇವೆ.

ಶ್ರೀ ಪಿ. ಎಂ. ಭಾಂಗಿ.—ಒಂದು ತಿಂಗಳು ಅಥವಾ ಎರಡು ತಿಂಗಳಲ್ಲಿ ಜೋಡಿಸಿಕೊಡುತ್ತೇವೆ ಎಂಬ ನಿರ್ದಿಷ್ಟವಾದ ಭರವಸೆ ಕೊಡಿ.

ಶ್ರೀ ಕೆ ಪ್ರಭಾಕರ್. —ಇಂತಿಷ್ಟು ದಿನಗಳಲ್ಲೇ ಮಾಡಿಸಿಕೊಡುತ್ತೇವೆ ಎಂದು ಹೇಳುವುದು ಕಷ್ಟ. ಆದರೂ ಕೂಡ ಆದಷ್ಟು ಬೇಗ ಮಾಡಿಸಿಕೊಡುತ್ತೇವೆ ಎಂದು ಹೇಳುವುದು ಸಂಪ್ರದಾಯ. ಆದರಂತೆ ಬೇಗ ಮಾಡಿಸಿಕೊಡುತ್ತೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಮಾನ್ಯ ಸದಸ್ಯರು ಹರಿಜನರು ನೀರಿಗಾಗಿ ಪರದಾಡುತ್ತಿದ್ದಾರೆ ಎಂದು ಹೇಳಿದ್ದಾರೆ, ತಕ್ಷಣ ಅವರಿಗೆ ನೀರು ಒದಗಿಸುವುದಕ್ಕೆ ಅನುಕೂಲವಾಗುವಂತೆ ಪಂಪ್‌ಗಳನ್ನು ಜೋಡಿಸುವುದಕ್ಕೆ ಏನು ಕಷ್ಟವಾಗಿದೆ ? ಆಗದೇ ಇದ್ದರೆ ಇಲ್ಲ ಎಂದು ಹೇಳಿಬಿಡಿ.

ಶ್ರೀ ಕೆ ಪ್ರಭಾಕರ್.—ಕುಡಿಯುವ ನೀರಿನ ವಿಷಯದಲ್ಲಿ ಇಲ್ಲ ಎನ್ನುವ ಪ್ರಶ್ನೆಯೇ ಇಲ್ಲ. ಸರ್ವ ಪ್ರಯತ್ನ ಮಾಡಿ ಈಗಾಗಲೇ ಪಂಪ್‌ಗಳನ್ನು ಜೋಡಿಸಿರತಕ್ಕದ್ದನ್ನು ತಾವು ಗಮನಿಸಬೇಕು. ಅದೇ ರೀತಿ ಉಳಿದಿರತಕ್ಕ ಕಡೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಬೇಗನೆ ಪಂಪ್‌ಸೆಟ್‌ಗಳನ್ನು ಹಾಕಿಕೊಡುವ ಪ್ರಯತ್ನ ಮಾಡಿದ್ದಾರೆ. ಆದಷ್ಟು ಬೇಗ ಮಾಡಿಕೊಡುತ್ತಾರೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಈ ಬೋರ್‌ವೆಲ್‌ಗಳಿಗೆ ಹ್ಯಾಂಡ್ ಪಂಪ್‌ಗಳನ್ನು ಜೋಡಿಸಿದ್ದಾರೆ. ಅದು ಬಹಳ ಕಡಿಮೆ ದರ್ಜೆಯಲ್ಲಿದೆ. ಯಾರಿಗೋ ಟೆಂಡರ್ ಕರೆದು ಕೊಟ್ಟು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಹಾಂಡ್ ಪಂಪ್‌ಗಳನ್ನು ಹಾಕಿಸಿದ್ದಾರೆ. ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಆ ಪಂಪ್ ಹಾಕಿರುವ ಕಡೆಗಳಲ್ಲಿ 8-10 ದಿವಸಕ್ಕಿಂತ ಹೆಚ್ಚಾಗಿ ಆ ಬೋರ್‌ವೆಲ್‌ನಿಂದ ಯಾರೂ ನೀರು ಕುಡಿದಿಲ್ಲ. ಅಷ್ಟರಲ್ಲಿಯೇ ಕೆಟ್ಟುಹೋಗುತ್ತದೆ. ಒಳ್ಳೆ ಹ್ಯಾಂಡ್ ಪಂಪ್‌ಗಳನ್ನು ಹಾಕಿ ಒಂದೆರಡು ಸಾವಿರ ರೂಪಾಯಿ ಆದರೂ ಚಿಂತೆ ಇಲ್ಲ ಉತ್ತಮ ದರ್ಜೆಯನ್ನು ಹಾಕಿ ಎಂದು ಪದೇ ಪದೇ ಹೇಳುತ್ತಿದ್ದರೂ ಕೂಡ ಕಡಿಮೆ ದರ್ಜೆಯ ಹ್ಯಾಂಡ್ ಪಂಪ್‌ಗಳನ್ನೇ ಯಾತಕ್ಕೆ ಜೋಡಿಸುತ್ತಿದ್ದಾರೋ ಗೊತ್ತಿಲ್ಲ ಒಳ್ಳೆ ದರ್ಜೆಯ ಪಂಪ್‌ಗಳನ್ನು ಜೋಡಿಸುವುದಕ್ಕೆ ಯಾತಕ್ಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಕೋಣಂದೂರು ಲಿಂಗಪ್ಪ. —ನೀವು ತೆಗೆದುಕೊಂಡಿರುವ ಪಂಪ್ ಸಪ್ಲೈ ಮಾಡಿದವರು ಯಾರು ? ಯಾವ ದರ್ಜೆಯದು, ಅದಕ್ಕೆ ಎಷ್ಟು ಕಮಿಷನ್ ಕೊಟ್ಟಿದ್ದಾರೆ

ಶ್ರೀ ಕೆ. ಪ್ರಭಾಕರ್ --ಮಾನ್ಯ ಸದಸ್ಯರಾದ ಹನುಮೇಗೌಡರು ಕೇಳುವ ಪ್ರಶ್ನೆ ಬಹಳ ಹಳೆಯದು. ಬೋರ್‌ವೆಲ್‌ಗಳಿಗೆ ಮೊದಲು ಪಂಪ್‌ಗಳನ್ನು ಹಾಕಿಸಿದಾಗ ಸಾಧಾರಣ ಯಂತ್ರವನ್ನು ಜೋಡಿಸಿದ್ದು ನಿಜ. ಆ ಪಂಪ್ರಗಳು ಬೇಗ ಬೇಗ ಕೆಟ್ಟುಹೋಗುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಮೇಲೆ ಉತ್ತಮ ದರ್ಜೆಯ ಪಂಪ್‌ಗಳನ್ನು ಹಾಕುತ್ತಿದ್ದೇವೆ. ಈಗ ಅಂಥ ದೂರುಗಳು ಬರುತ್ತಿಲ್ಲ

ಶ್ರೀ ಕೆ. ಎಚ್. ಹನುಮೇಗೌಡ.—ಅನಾನುಕೂಲಗಳಾಗಿವೆ ಎಂದು ನಾವು ಹೇಳುತ್ತಿದ್ದರೂ ದೂರುಗಳು ಬಂದಿಲ್ಲವೆಂದು ನೀವು ಹೇಳುತ್ತಿದ್ದೀರಲ್ಲಾ.

ಶ್ರೀ ಕೆ. ಪ್ರಭಾಕರ್.—ಮೊದಲು ಮೊದಲು ಜೋಡಿಸಿದ್ದ ಪಂಪ್‌ಗಳು ಬೇಗ ಬೇಗ ಕೆಟ್ಟು ಹೋಗುತ್ತಿತ್ತು. ಈಗ ಜೋಡಿಸುತ್ತಾ ಇರತಕ್ಕ ಹೊಸ ನಮೂನೆಯ ಯಂತ್ರಗಳು ಬೇಗ ಕೆಟ್ಟು ಹೋಗುತ್ತಿಲ್ಲ. ಅಲ್ಲಲ್ಲಿ ಕೆಟ್ಟುಹೋಗಿದ್ದರೆ ಅವು ಯಂತ್ರಗಳು ಎಂಬುದನ್ನು ತಾವು ಮರೆಯಬಾರದು. ಒಂದೊಂದು ವೇಳೆ ಏರೋಪ್ಲೇನ್‌ಗಳೂ ಕೂಡ ಕೆಟ್ಟು ಹೋಗುತ್ತವೆ ಎಂದು ಪೇಪರ್‌ನಲ್ಲಿ ಬರುತ್ತಿದೆ. ಆದ್ದರಿಂದ ಯಂತ್ರಗಳು ಕೆಟ್ಟು ಹೋಗುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಕೆಟ್ಟಿವೆ ಎಂದು ದೂರು ಬಂದಕೂಡಲೇ ಬೇಗ ಸರಿ ಮಾಡಿಸುವ ಏರ್ಪಾಡು ಮಾಡಿದೆ.

ಶ್ರೀ ಕೆ. ಎಚ್ ಹನುಮೇಗೌಡ.—ಎರಡು ಸಾವಿರ ರೂಪಾಯಿಗೆ ಸಿಗತಕ್ಕ ಹ್ಯಾಂಡ್ ಪಂಪ್‌ಗಳನ್ನು ಜೋಡಿಸಿದರೆ ಚನ್ನಾಗಿರುತ್ತದೆ. ಒಳ್ಳೆ ಕ್ವಾಲಿಟಿ ಇರುತ್ತದೆ ಉತ್ತರ ಇಂಡಿಯಾದಲ್ಲೆಲ್ಲಾ ಅದನ್ನೇ ಜೋಡಿಸಿದ್ದಾರೆ. ಅದನ್ನೇ ಇಲ್ಲೂ ಕೂಡ ಯಾತಕ್ಕೆ ಜೋಡಿಸಬಾರದು? ಕಡಿಮೆ ದರ್ಜೆ ಪಂಪ್ ಹಾಕಿರುವ ಕಡೆಗಳಲ್ಲಿ ಯಾರೂ ಕೂಡ ಹದಿನೈದು ದಿವಸಕ್ಕಿಂತ ಹೆಚ್ಚಾಗಿ ನಿಲ್ಲಿಂದ ನೀರು ಕುಡಿದಿಲ್ಲ. ಅದಕ್ಕೆ ತಾವು ಉತ್ತರ ಹೇಳಿ.

ಅಧ್ಯಕ್ಷರು --ಮಾಡಿಸಿಕೊಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ನಮ್ಮ ಕಡೆ ನಾಲ್ಕು ಹ್ಯಾಂಡ್ ಪಂಪ್‌ಗಳಲ್ಲಿ 3 ಹ್ಯಾಂಡ್ ಪಂಪ್‌ಗಳಿಗೆ ಹ್ಯಾಂಡ್ ಹೋಗಿ ಈಗ ಪಂಪ್ ಮಾತ್ರ ಉಳಿದಿದೆ.

(ನಗು)

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಈ ಪಂಪ್‌ಗಳನ್ನು ತಯಾರು ಮಾಡತಕ್ಕ ಕಾರ್ಖಾನೆಗಳು ಎಷ್ಟು? ಮತ್ತು ಅವರಿಂದ ಒಂದು ವರ್ಷ ಗ್ಯಾರಂಟಿ ತೆಗೆದುಕೊಂಡು ಪಂಪ್‌ಗಳನ್ನು ಖರೀದಿ ಮಾಡತಕ್ಕ ವ್ಯವಸ್ಥೆ ತಾವು ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಮಾನ್ಯ ಸದಸ್ಯರ ಉತ್ಸಾಹವನ್ನು ಮೆಚ್ಚಬಹುದಾದರೂ ಕೂಡ ಈ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಕಾರಣ ಇದು ಜಮಖಂಡಿಗೆ ಸಂಬಂಧಿಸಿದ ಪ್ರಶ್ನೆ.

ಶ್ರೀ ಟಿ. ಎಂ. ಮಂಜುನಾಥ್.—ಜಮಖಂಡಿ ಕರ್ನಾಟಕ ರಾಜ್ಯದಲ್ಲಿದೆ. ಬಹುಶ: ಮಂತ್ರಿಗಳು ಮರೆತಿರಬಹುದು ನಾನು ಕರ್ನಾಟಕಕ್ಕೆ ಸಂಬಂಧಪಟ್ಟ ಪ್ರಶ್ನೆಯನ್ನೇ ಕೇಳುತ್ತಿದ್ದೇನೆ. ಜಮಖಂಡಿಯಲ್ಲೇ ಆಗಲಿ ಪಂಪ್‌ಗಳನ್ನು ಕಾರ್ಖಾನೆಯಿಂದ ತೆಗೆದು ಕೊಳ್ಳುವಾಗ ಒಂದು ವರ್ಷ ಗ್ಯಾರಂಟಿ ಮೇರೆ ತೆಗೆದುಕೊಳ್ಳುತ್ತಿದ್ದೀರಾ ? ಇದು ಸಾರ್ವಜನಿಕ ಹಣವಾದ್ದರಿಂದ ಮೂರು ಮೂರು ದಿವಸಕ್ಕೆ ಪಂಪ್ ಮುರಿದು ಹೋದರೆ ಹಣ ಪೋಲಾಗುತ್ತದೆ. ಇದು ಸರಿಯಲ್ಲ. ಆದ್ದರಿಂದ ಒಂದು ವರ್ಷ ಗ್ಯಾರಂಟಿ ಕೊಡತಕ್ಕ ಕಾರ್ಖಾನೆಗಳಿಂದ ಪಂಪ್‌ಗಳನ್ನು ಪಡೆಯತಕ್ಕ ಏರ್ಪಾಟು ಮಾಡುತ್ತೀರಾ ?

SRI K. PRABHAKAR.—It is a very good suggestion for action. ಒಳ್ಳೆ ಪಂಪ್‌ಗಳು ಸಿಕ್ಕಿದರೆ ಹೆಚ್ಚು ದುಡ್ಡು ಖರ್ಚಾದರೂ ಕೂಡ ಅದನ್ನೇ ಕೊಂಡು ಕೊಂಡು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.